ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 1ನೇ ಮಾರ್ಚ್ 96ರ 10ನೇ ಪಟ್ಟಿಯಲ್ಲಿ ಲಿಖಿತ ಮೂಲಕ ಉತ್ತರಿಸುವ 61 ಪ್ರಶ್ನೆಗಳ ಪೈಕಿ 40 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಬೆಂಗಳೂರು ನಗರದಲ್ಲಿ ಅಕ್ರಮವಾಗಿ ನಲ್ಲಿ ಸಂಪರ್ಕ ಹೊಂದಿರುವುದು

675 - ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಅಕ್ರಮ ನಲ್ಲಿ ಸಂಪರ್ಕವನ್ನು ಹೊಂದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಎಷ್ಟು ಮನೆಗಳಿಗೆ ಇಂತಹ ಅಕ್ರಮ ಸಂಪರ್ಕವನ್ನು ಹೊಂದಿರುತ್ತಾರೆ.

ಇ) ಅಕ್ರಮವಾಗಿ ಸಂಪರ್ಕಗಳನ್ನು ಕಲ್ಪಿಸುವ ಅಧಿಕಾರಿಗಳ ವಿರುದ್ಧ ಇದುವರೆವಿಗೂ ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ?

ಈ) ಇಂತಹ ಅಕ್ರಮ ಸಂಪರ್ಕಗಳನ್ನು ಸಕ್ರಮಗೊಳಿಸುವ ಬಗ್ಗೆ ಸರ್ಕಾರದ ಯೋಚಿಸಿದೆಯೇ?

ಶ್ರೀ ಆರ್. ರೋಷನ್ ಬೇಗ್ (ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ಸಚಿವರು) :

ಅ) ಹೌದು.

ಆ) ನಗರಾದ್ಯಂತ ಸುಮಾರು 35 ಸಾವಿರ ಮನೆಗಳಲ್ಲಿ ಅಕ್ರಮ ನಲ್ಲಿ ಸಂಪರ್ಕಗಳನ್ನು ಹೊಂದಿರುತ್ತಾರೆ.

ಇ) ಅಕ್ರಮ ಸಂಪರ್ಕಗಳನ್ನು ಬೆಂಗಳೂರು ಜಲಮಂಡಳಿಯ ಅಧಿಕಾರಿಗಳು ಕೊಟ್ಟಿರುವುದಿಲ್ಲ. ರಮಿಸ್ಯೂ ಬಡಾವಣೆಗಳಲ್ಲಿ ವಾಸಿಸುವ ಸಾರ್ವಜನಿಕರು ಜಲಮಂಡಳಿಯ ಪರವಾನಿಗೆ ಇಲ್ಲದೆ ನೀರಿನ ಸಂಪರ್ಕಗಳನ್ನು ಅಕ್ರಮವಾಗಿ ಪಡೆದುಕೊಂಡಿರುತ್ತಾರೆ.

ಈ) ಹೌದು. ಸರ್ಕಾರವು ಬಡಾವಣೆಗಳಲ್ಲಿರುವ ಅಕ್ರಮ ಸಂಪರ್ಕಗಳನ್ನು ಸಕ್ರಮಗೊಳಿಸಲು ತೀರ್ಮಾನಿಸಿದೆ. ಖಾತಾ ಅಥವಾ ಹಕ್ಕು ಪತ್ರವುಳ್ಳ ಮನೆಗಳಿಗೆ ಬೆಂಗಳೂರು ಜಲಮಂಡಳಿಯು ನೀರಿನ ಮೀಟರ್ ಚಾರ್ಜು ಹಾಗೂ ಠೇವಣಿ ಹಣವನ್ನು ಪಡೆದುಕೊಂಡು ಸಕ್ರಮಗೊಳಿಸಲು ಕ್ರಮಗೊಳ್ಳಲಾಗುತ್ತಿದೆ.

ತುಂಗಾಭದ್ರಾ ನಾಲೆಯ ಬದುಗಳನ್ನು ಬಲಗೊಳಿಸುವುದು

676 - ಶ್ರೀ ಎಂ.ಪಿ. ಅಪ್ಪಚ್ಚುರಂಜನ್ (ಸೋಮವಾರಪೇಟೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಭದ್ರಾ ಎಡದಂಡೆ ನಾಲೆಯ ಎರಡೂ ಕಡೆಯ ಬದುಗಳನ್ನು ಬಲಗೊಳಿಸುವ

ಯೋಜನ ಸರ್ಕಾರಕ್ಕೆ ಇದಯೇ?

ಬ) ಹಾಗಿದ್ದಲ್ಲಿ ಈ ಕೆಲಸಗಳನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು.

ಇ) ಇದಕ್ಕೆ ಇದುವರೆವಿಗೂ ಏನಾದರೂ ಹಣವನ್ನು ಬಿಡುಗಡೆ ಮಾಡಿದೆಯೇ? ಹಾಗಿದ್ದಲ್ಲಿ ಒಟ್ಟು ಎಷ್ಟು ಹಣವನ್ನು ಬಿಡುಗಡೆ ಮಾಡಿದೆ? ಒಟ್ಟು ಅಂದಾಜು ತಗಲುವ ವೆಚ್ಚವೆಷ್ಟು?

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಹೌದು.

ಆ) ತುಂಗಭದ್ರಾ ಯೋಜನೆಯ ನೀರಾವರಿ ಸಲಹಾ ಸಮಿತಿಯು ಈಗಾಗಲೇ ತೀರ್ಮಾನ ತೆಗೆದುಕೊಂಡಿರುವಂತೆ ಈ ಕೆಲಸಗಳನ್ನು ದಿನಾಂಕ 1-4-96 ರಿಂದ 15-6-1996ರ ವರಗೆ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಇ) ಹೌದು, ಬಿಡುಗಡೆ ಮಾಡಲಾಗಿದೆ. 31-1-96ರವರೆಗೆ ಈ ಕೆಲಸಗಳಿಗೆ ರೂ. 1.45 ಕೋಟಿ ಬಿಡುಗಡೆ ಮಾಡಿದೆ.

ಈ ಕಾಮಗಾರಿಗಳಿಗೆ ತಗಲುವ ಒಟ್ಟು ಅಂದಾಜು ವೆಚ್ಚ ರೂ. 19.665 ಕೋಟಿ.

ತುಂಗಭದ್ರಾ ಎಡದಂಡೆ ಕಾಲುವೆ ದುರಸ್ಥಿ

677 - ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರ ಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಯ 18ನೇ ಮೈಲಿನಲ್ಲಿ ರಂಧ್ರವೊಂದು ಕಾಣಿಸಿಕೊಂಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಈ ರಂಧ್ರ ಮುಚ್ಚುವಲ್ಲಿ ಸರ್ಕಾರ ಯಶಸ್ವಿಯಾಗಿದೆಯೇ

ಇ) ಇದಕ್ಕಾಗಿ ಆದ ಒಟ್ಟು ವೆಚ್ಚವೆಷ್ಟು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಪ್ರಸ್ತುತ ನೀರಾವರಿ ವರ್ಷದಲ್ಲಿ ಮೈಲ್ 18ರಲ್ಲಿ ಯಾವುದೇ ರಂಧ್ರವಾಗಿರುವುದಿಲ್ಲ.

ಆ) ಯಾವುದೇ ರಂಧ್ರ ಕಾಣಿಸದೇ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಯಾವುದೇ ಖರ್ಚು ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಅರಕ್ಷಕ ಉಪ ನಿರೀಕ್ಷಕರ ನೇಮಕಾತಿ.

678 - ಶ್ರೀ ಅಮರೇಗೌಡ ಪಾಟೀಲ್ (ಲಿಂಗಸುಗೂರು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?